ಮೈಸೂರ ಗೆಜೆಟ್.

ಸಂ. 42.] ಸರ್ಕಾರದಿಂದ ಪ್ರಸಿದ್ಧ. [ನಂ. 21.

ಬೆಂಗಳೂರು, ಗುರುವಾರ, ಮೇ ತಾ॥ 23, ಸನ 1907.

II ನೆ ಭಾಗ

ಇಂಡಸ್ಟ್ರಿಗವರ್ನಮೆಂಟ್, ರೆಸಿಡೆಂಟರು, ಚೀಫ್ ಕಮಿಷನರ್ರು ಮತ್ತೆ ರೈಲ್ವೇರಿಂದ ಕೊಡೋಕ್ಕಾದ ಇನ್ಸಿ ಹಾರ್ನಾಮೆಗಳು.

ಫಾರೆಸ್ಟ್ ಇಲಾಖೆ.

ನೋಟಿಫಿಕೇಷನ್.

ತಾರೀಖು 16ನೆ ಮೇ 1907.

1. ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ—ಈ ಡಿಸ್ಟ್ರಿಕ್ಟಿನ ಈ ಕೆಳಗೆ ಕಾಣುವ ತಾಲ್ಲೂಕುಗಳಲ್ಲಿರುವ ಸ್ಟೇಟ್ ಫಾರೆಸ್ಟ್ (ಕರ್ತವ್ಯಕ್ಕೆ ಆದ ಕೂಪುಗಳು ವಿನಹ) ಮತ್ತು ಕಮುಷೀಯಟ್ ಕಾವಲುಗಳು ಸೇರಿಸಿಕ್ಕೊಂಡು ಇತರ ಎಲ್ಲಾ ಸರ್ಕಾರಿ ಜಂಗಲ್ ಮತ್ತು ಬಂಜರ್ ಜಮೀನ್‌ಗಳಲ್ಲಿಯೂ ಸಹಾ ಇರತಕ್ಕ ತಂಗಡಿ ಮತ್ತು ಕಕ್ಕೆ ಚಕ್ಕೆಗಳನ್ನು 1907ನೆ ಜಾಲ್ಯೆ ಗುರ್ರೆ ಲಾಗಾಯತು 1909ನೆ ಇಸವಿ ಜೂನ್ ಆಖೈರ್ ವರಿಗೆ ಜಮಾಯಿಸಿ ತೆಗದುಕ್ಕೊಂಡು ಹೋಗತಕ್ಕ ಬಟ್ಟು ಸ್ವತಂತ್ರ ಹಕ್ಕನ್ನು 1907ನೆ ಇಸವಿ ಜೂನ್ ತಾರೀಖು 24ರಲ್ಲಿ ಬೆಂಗಳೂರು ಮೊಕ್ಕಾ ವಿನಲ್ಲಿ ಬೆಂಗಳೂರು ಡಿಸ್ಟ್ರಿಕ್ಟ್ ಡೆಪ್ಯೂಟಿ ಕವಿಷನರವರ ಆಫೀಸಿನಲ್ಲಿ ಡೆಪ್ಯೂಟಿ ಕವಿಷನರವರೊಂದಿಗೆ ಆಗಲಿ ಅಥವಾ ಅವರಿಂದ ನೇಮಕ ಮಾಡಲ್ಪಡುವ ಇತರ ಆಫಿಸರವರೊಂದಿಗೆ ಆಗಲಿ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ತಾಲ್ಲೂಕೆವಾರ್ ಒಹರಂಗವಾರ ಹರಾಜ್ ಮೂಲಕ ವಿಕ್ರಯಿಸುತ್ತಾರೆ.

1—7—1907ರ ಲಾಗಾಯತು 30—6—09ರ ವರಿಗೆ.

(1) ಕಾನಕಾನಹಳ್ಳಿ	(3) ಆನೇಕಲ್.
(2) ಮೂಗಡಿ	(4) ದೊಡ್ಡಬಳ್ಳಾಪುರ

2. ಹರಾಜ್ ತಾರೀಖಿನ ದಿವಸ ಮಧ್ಯಾಹ್ನ 2 ಘಂಟೆಗೆ ಹರಾಜ್ ಸುರು ಮಾಡಲ್ಪಡುವದು. ಅದೇ ದಿವಸದಲ್ಲಿ ಹರಾಜು ಪೂರೈಸದ ಪಕ್ಷಕ್ಕೆ ಮಾರನೇ ದಿವಸ ಅದೇ ಕಾಲಕ್ಕೆ ಸರಿಯಾಗಿ ಪುನಹ ಹರಾಜು ಮಾಡಲ್ಪಡುವದು.

3. ಮೇಲೆ ವಿವರಿಸಿರುವಂತೆ ತಂಗಡಿ ಮತ್ತು ಕಕ್ಕೆ ಚಕ್ಕೆ ಜವ್ವಾವಣಿ ಹಕ್ಕನ್ನು ಚತರರಖಾಸ್ತುದಾರನಿಗೆ ವಿಲೇವಾರಿ ಮಾಡಲ್ಪಡ್ಡುದು. ಆದರೆ ಹರಾಜು ಡೆಪ್ಯೂಟಿ ಕವಿಷ್ಕನರವರ ಮಂಜೂರಾತಿಗೆ ಒಳಪಟ್ಟು ಇರುತ್ತೆ. ಯಾವ ದರಖಾಸ್ತನ್ನಾದರೂ ಯಾವ ಕಾರಣವನ್ನು ನ್ಯಾಯವಿದೆ ಅಂಗೀಕರಿಸುವದಕ್ಕೂ ಅಥವಾ ನಿರಾಕರಿಸುವದಕ್ಕೂ ಇರುವ ಹಕ್ಕನ್ನ ಡೆಪ್ಯೂಟಿ ಕವಿಷ್ಕನರವರು ತಾವೆ ಉಳಿಸಿಕೊಂಡು ಇರುತ್ತಾರೆ.

4. ದರಖಾಸ್ತು ಮಾಡಲು ಅಭಿಪ್ರಾಯವುಳ್ಳ ಜನಗಳು ಖುದ್ದಾಗಲಿ ಅಥವಾ ಅವರುಗಳಿಂದ ಕ್ರಮಪ್ರಕಾರ ಅಪ್ಪಣೆಯನ್ನು ಪಡೆದ ಏಜಂಟ್ ಯಾ ಮುಕ್ತಾರ್‌ನಿಕರ ಮೂಲಕ್ಕವಾಗಿಯಾಗಲಿ ಹಾಜರಾಗಬೇಕು. ಯಾವ ದರಖಾಸ್ತು ದಾರನಾಗಲಿ (100) ಒಂದು ನೂರು ರೂಪಾಯಿಗಳನ್ನ ಠೇವಣಿ ಇಡದ ವಿನಹ ತನಿಗೋಸ್ಕರವಾಗಿ ಆಗಲಿ ಅಥವಾ ಇತರರಿಗೋಸ್ಕರವಾಗಿಯಾಗಲಿ ಸವಾಲ್ ಮಾಡಲು ಆತನಿಗೆ ಅಪ್ಪಣೆ ಕೊಡಲ್ಪಡುವದಿಲ್ಲ. ಮಂಜೂರ್ಮಾಡಲ್ಪಟ್ಟ ದರಖಾಸ್ತು ದಾರರಲ್ಲದ ಇತರ ದರಖಾಸ್ತು ದಾರರಿಂದ ಹಾಜರಾದ

ಪೊಬಲಗು ಹರಾಜು ಖೈದಾದೊಡನೆ ವಾಪಸ್ ಮಾಡಲ್ಪಡುವದು. ಆಖೈರ್ ಚಡದರಖಾಸ್ತುದಾರು ಹರಾಜು ಮಂಜೂರಾದ ಸಂಗತಿ ತಮಗೆ ತಿಳಿಸಿದ ಐದು ದಿವಸದೊಳಗೆ ತಾವು ಮೊದಲೇ ಇಟ್ಟಿದ್ದ ಡಿಪಾಜಿಟ್ ಪೊಬಲಗು ಸೇರಿಸಿ ಒಟ್ಟು ಹರಾಜು ಪೊಬಲಗಿನ ಶಾಲು ಹಿಸ್ಸೆ ಪೊಬಲಗನ್ನು ಬೆಂಗಳೂರು ಡಿಸ್ಟ್ರಿಕ್ಟ್ ಟ್ರೆಜರಿಗೆ ಪಾವತಿ ಮಾಡತಕ್ಕದ್ದು. ಹಾಗೆ ಮಾಡದೆ ತಪ್ಪಿದಲ್ಲಿ ಮೊದಲೆ ಇಟ್ಟಿದ್ದ ಠೇವಣಿ ಪೊಬಲಗನ್ನ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದಲ್ಲದೆ ಹರಾಜು ಕ್ರಮ ನಡಿಸುವ ಆಫಿಸರರಿಂದ ಸದರೀ ಬಾಬ್ ಪುನಹ ಹರಾಜು ಮಾಡಲ್ಪಡುವದು.

5. ಮೇಲ್ಕಂಡಂತೆ ನಡಿಸಲ್ಪಡುವ ದುಸರಾ ಹರಾಜಿನಲ್ಲಿ ಉಂಟಾಗುವ ನಷ್ಟಕ್ಕೆ ಹಣ ಕೊಡಲು ತಪ್ಪಿದ ಅವಲ್ ಚಡದರ ಖಾಸ್ತುದಾರನು ಗುರಿಯಾಗತಕ್ಕದ್ದು. ದುಸರಾ ಹರಾಜಿನಲ್ಲಿ ಜಾಸ್ತಿ ಪೊಬಲಗು ಉತ್ಪತ್ತಿಯಾದಲ್ಲಿ ಆಂಥಾ ಜಾಸ್ತಿ ಪೊಬಲಗಿಗೆ ಅವಲ್ ಚಡದರಖಾಸ್ತುದಾರನಿಗೆ ಯಾವ ಹಕ್ಕು ಇರುವದಿಲ್ಲ. ಆದರೆ ದುಸರಾ ಹರಾಜಿನಲ್ಲಿ ಹುಟ್ಟುವ ಪೊಬಲಗು ಮೊದಲಿನ ಹರಾಜು ಪೊಬಲಗಿಗೆ ಕಮ್ಮಿಯಾದಲ್ಲಿ ಆರೀತಿ ಕಮ್ಮಿದಾಗುವ ಪೊಬಲಗನ್ನು ಅವಲ್ ದರಖಾಸ್ತುದಾರನು ಪಾವತಿ ಮಾಡಲು ಬದ್ಧನಾಗಿರುತ್ತಾನೆ.

6. ಇಜಾರೆದಾರನು ಇದರಡಿ ನಮೂದಿರುವ ಷರತ್ತುಗಳ ಮೇರಿಗೆ ನಡಕೊಳ್ಳಲು ತಾನು ಬದ್ಧನಾಗಿರುತ್ತಾನಾಗಿ ಬಂದು ಮುಚ್ಚಳಿಕೆಯನ್ನು ಬರದು ರುಜು ಹಾಕಿ ಕೊಡತಕ್ಕದ್ದು. ಇಜಾರೆ ಮಂಜೂರಾದ ಸಂಗತಿ ಆತನಿಗೆ ತಿಳಿಸಿದ ಏಳು ದಿವಸದೊಳಗಾಗಿ ಮುಚ್ಚಳಿಕೆಯನ್ನು ಆತನು ಬರದುಕೊಡತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಠೇವಣಿ ಪೊಬಲಗು ದಂಡವಾಗಿ ಸೇರಿಸಿಕೊಳ್ಳುವದಲ್ಲದೆ ಬಾಬು ಪುನಹ ಹರಾಜು ಮಾಡಲ್ಪಡುವದು.

ಇಜಾರೆದಾರನು ಗುತ್ತಾ ಪೊಬಲಗಿನ ಬಾಕಿ ಪೊಬಲಗನ್ನ ಮತ್ತು ಪೂರಾ ಪೊಬಲಗಿನ ಮೇಲೆ ರೂಪಾಯಿಗೆ ಬಂದಾಣಿ ಮೇರಿಗೆ ಆಗುವ ಲೋಕಲ್ ಸೆಸ್ ಸಹಾ ಸಮವಾದ ಎಂಟು ಖಿಸ್ತುಗಳಲ್ಲಿ ಈ ಕೆಳಗೆ ಕಾಣುವಂತೆ ಪಾವತಿ ಮಾಡತಕ್ಕದ್ದು. ಮೊದಲನೇ ಖಿಸ್ತು 1907ನೆ ಇಸವಿ ಜುಲೈ 1ನೆ ತಾರೀಖು, 2ನೆ ಖಿಸ್ತು 1907ನೆ ಇಸವಿ ಸೆಪ್ಟಂಬರ್ 1ನೆ ತಾರೀಖು, 3ನೆ ಖಿಸ್ತು 1907ನೆ ಇಸವಿ ಡಿಸೆಂಬರ್ 1ನೆ ತಾರೀಖು, 4ನೆ ಖಿಸ್ತು 1908ನೆ ಇಸವಿ ಮಾರ್ಚಿ 1ನೆ ತಾರೀಖು, 5ನೆ ಖಿಸ್ತು 1908ನೆ ಇಸವಿ ಜುಲೈ 1ನೆ ತಾರೀಖು 6ನೆ ಖಿಸ್ತು 1908ನೆ ಇಸವಿ ಸೆಪ್ಟಂಬರ್ 1ನೆ ತಾರೀಖು. 7ನೆ ಖಿಸ್ತು 1908ನೆ ಇಸವಿ ಡಿಸೆಂಬರ್ 1ನೆ ತಾರೀಖು, 8ನೆ ಖಿಸ್ತು 1909ನೆ ಮಾರ್ಚಿ 1ನೆ ತಾರೀಖು, ಯಾವದಾದರೂ ಬಂದು ಖಿಸ್ತು ಮೇಲೆ ಕಂಡಂತೆ ಪಾವತಿಯಾಗದೆ ತಪ್ಪಿದಲ್ಲಿ ಚಕ್ಕೆಗಳ ಜವಾಬಣಿ ಮತ್ತು ರಫ್ತು ಮಾಡುವದನ್ನೆ ನಿಲ್ಲಿಸಿಬಿಡಲ್ಪಡುತ್ತೆಯಲ್ಲದೆ ಇಜಾರೆ ಪೊಬಲಗಿನ ಬಾಕಿ ಪೊಬಲಗು ಯಾವತ್ತನ್ನು ರೆವಿನ್ಯೂ ಕಂದಾಯದಂತೆ ವಸೂಲ್ಮಾಡಿ ಇಜಾರೆಯನ್ನು ವಜಾ ಮಾಡಲ್ಪಡುವದು.

ಷರತ್ತುಗಳು.

(1) ಬಂದು ವರುಷಕ್ಕೆ ಬಳಪಟ್ಟ ಎಳೇಗಿಡ ಅಥವಾ ಕೊಂಬೆಯನ್ನು ಕಡಿಯಬಾರದು ಮತ್ತು ಚಿಕ್ಕೆ ತೆಗಿಯಬಾರದು.

(2) ಇಜಾರೆದಾರನ ನೌಕರರೇ ಆಗಲಿ ಅಥವಾ ಷಿಕ್ಮಿ ಕಂಟ್ರಾಕ್ಟುದಾರರೇ ಆಗಲಿ ಎಳೇ ಗಿಡಗಳನ್ನು ಕಡಿಯುದಂಥೆ ಕಂಟ್ರಾಕ್ಟುದಾರ ಜವಾಬ್ದಾರನಾಗಿರಬೇಕು.

(3) ಚಕ್ಕೆ ಜವಾಬಣಿ ಬಗ್ಯೆ ಬೇರೆ ಬೇರೆ ವಿಂಗಡಿಸುವ ಸರ್ಕಲ್‌ನಲ್ಲಿ ನೇಮಿಸಲ್ಪಡುವ ಇಜಾರೆದಾರನ ಮೇಸ್ತ್ರಿಗಳ ಮತ್ತು ಷಿಕಮ್ಮಿ ಕಂಟ್ರಾಕ್ಟುದಾರುಗಳ ಹೆಸರಿನ ಮತ್ತು ಚಿಕ್ಕೆಯನ್ನು ರಫ್ತು ಮಾಡುವದಕ್ಕೆ ಮುಂಚೆ ದಾಸ್ತಾನ್ ಮಾಡಿ ಇಡುವ ಜಾಗಾಗಳ ಬಂದು ಪಟ್ಟಿಯನ್ನು ಇಜಾರೆದಾರನು ಕೊಡತಕ್ಕದ್ದು.

(4) ತೊಗಟೆ ತೆಗದನಂತರ ಬೆಳೆಯುವ ಆ ಸಂಬಂಧವಾದ ವಿಷಿಷ್ಟ ಸೌದೆಯೂ ಇಜಾರೆದಾರನಿಗೆ ಸೇರಿದ್ದಾಗಿರುತ್ತೆ.

(5) ಸ್ಟೇಟ್ ಫಾರೆಸ್ಟ್ ಅಥವಾ ಪ್ಲಾಂಟೇಷನ್ನಲ್ಲಿ ಚಕ್ಕೆಯನ್ನು ಜವಾಯಿಸಬೇಕಾದರೆ ಅವುಗಳ ಚಾರ್ಜಿನಲ್ಲಿರುವ ರೇಂಜ್ ಆಫಿಸರು ಮತ್ತು ಫಾರೆಸ್ಟರಿಂದ ಲಿಖಿತಮೂಲಕವಾದ ಅಪ್ಪಣೆ ಪಡೆಯದೆ ಪ್ರವೇಶ ಮಾಡಕೂಡದು.

(6) ಸೊಸಿ ಹಾಕಿ ಆಗಲಿ, ಅಭಿವೃದ್ಧಿಪಡಿಸುವದಕ್ಕಾಗಲಿ ಯಾ ಇತರ ಫಾರೆಸ್ಟ್ ಕೆಲಸಗಳು ನಡಿಸುವದಕ್ಕಾಗಿ ಬಹಿರಂಗವಾಗಿ ಬಂದ್ ಮಾಡಲ್ಪಟ್ಟಿರುವ ಸ್ಟೇಟ್ ಫಾರೆಸ್ಟ್ ಯಾ ಪ್ಲಾಂಟೇಷನ್‌ಗಳ ಭಾಗಗಳಲ್ಲಿ ಚಕ್ಕೆ ಜವಾಬಣಿ ಕೆಲಸ ನಡಿಸಕೂಡದು.

(7) ಇಜಾರೆ ಮೇರಿಗೆ ರಫ್ತು ಮಾಡಲ್ಪಡುವ ಚಕ್ಕೆಯ ಪ್ರಮಾಣ ವಗೈರೆ ತಪಶೀಲು ಕಾಣುವ ಲೆಖ್ಖಗಳನ್ನು ಇಜಾರೆದಾರನು ಇಡತಕ್ಕದ್ದು. ಅಂಥಾ ಲೆಖ್ಖವನ್ನ ಡೆಪ್ಯುಟಿ ಕಮಿಷನರಾಗಲಿ ಅಥವಾ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರೇ ಆಗಲಿ ಅಥವಾ ಇವರುಗಳ ಪೈಕಿ ಯಾರಿಂದಲೇ ಆಗಲಿ ನೇಮಿಸಲ್ಪಡುವ ಇತರ ಆಫಿಸರೇ ಆಗಲಿ ತನಿಖೆಗೆ ಬಂದಾಗ ಅವರ ತನಿಖೆಗೆ ಹಾಜರ್ಮಾಡತಕ್ಕದ್ದು.

(8) ಸಾಗಿಸಿಕೊಂಡು ಹೋಗುವ ಪ್ರತಿಬಂದು ಗಾಡಿ ಬೋಜಾ ಚಕ್ಕೆಗೂ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ ನಿಯಮಿಸಲ್ಪಡುವ ರೀತಿಯಲ್ಲಿ ಇಜಾರೆದಾರನು ಪ್ಯಾಸ್ ಪಡೆಯತಕ್ಕದ್ದು.

(9) ಡಿಸ್ಟ್ರಿಕ್ಟಿನ ಕೋರಿಗಳಲ್ಲಿ ಮತ್ತು ರೈಲ್ವೆ ಸ್ಟೇಷನ್‌ಗಳಲ್ಲಿ ದಾಸ್ತಾನ್ ಮಾಡಿರುವ ಎಲ್ಲಾ ಚಕ್ಕೆಗಳನ್ನು 15-7-1909 ಒಳಗಾಗಿ ಡಿಸ್ಟ್ರಿಕ್ಟಿನ ಸರಹದ್ದಿನ ಹೊರಗೆ ರಫ್ತು ಮಾಡಿಕೊಳ್ಳತಕ್ಕದ್ದು.

(10) ಮೇಲೆ ನಮೂದಾಗುವ ಷರತ್ತುಗಳ ಪೈಕಿ ಯಾವದಾದರು ಬಂದು ಷರತ್ತಿಗೆ ಇಜಾರೆದಾರನು ತಪ್ಪು ನಡದಲ್ಲಿ ಇಜಾರೆ ಹಕ್ಕು ರದ್ದು ಮಾಡಲ್ಪಡುವದಲ್ಲದೆ ಅದುವರೆವಿಗೂ ಜವಾಯಿಸಿ ಇರುವ ವಿಶಿಷ್ಟ ಚಕ್ಕೆಯನ್ನು ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದು ಮತ್ತು ಇಜಾರೆದಾರನಿಂದ ಪಾವತಿ ಮಾಡಲ್ಪಟ್ಟಿರುವ ಪೂರಾ ಇಜಾರೆ ಪೊಬಲಗನ್ನೇ ಆಗಲಿ ಅಥವಾ ಆ ಪೈಕಿ ಡೆಪ್ಯುಟಿ ಕಮ್ಮಿಷನರವರಿಂದ ತೀರ್ಮಾನಿಸಲ್ಪಡಬಹುದಾದ ಪೊಬಲಗನ್ನೇ ಆಗಲಿ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದು.

ನೋಟಿಫಿಕೇರ್ಷ, ತಾರೀಖು 16ನೆ ಮೇ 1907.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಇದರಡಿ ನಮೂದಾಗಿರುವ ಬೆಂಗಳೂರು ಡಿಸ್ಟ್ರಿಕ್ಟ್ ಸ್ಪೇಷಿ ಮತ್ತು ರವಿನ್ಯೂ ಪ್ಲಾಂಟೇರ್ಷಗಳ ಹುಲ್ಲನ್ನು 1908ನೆ ಇಸವಿ ಜನವರಿ ಆಖೈರು ವರಿವಿಗೆ ಕುಯಿದು ಸಾಗಿಸಿಕೊಳ್ಳುವ ಹಕ್ಕನ್ನು ಸದರೀ ಪ್ಲಾಂಟೇರ್ಷಗಳ ಬಜಾದಲ್ಲಿ ನಮೂದಾಗಿ ಇರುವ ತಾರೀಖುಗಳಲ್ಲಿ ಮತ್ತು ಸ್ಥಳಗಳಲ್ಲಿ ಬೆಂಗಳೂರು ಡಿಸ್ಟ್ರಿಕ್ಟ್ ಫಾರಸ್ಟ್ ಆಫಿಸರವರಿಂದಲಾಗಲೀ ಅಥವಾ ರೇಂಜ್ ಫಾರೆಸ್ಟ್ ಆಫಿಸರವರಿಂದಲಾಗಲೀ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

ತಾಲ್ಲೂಕು.	ಪ್ಲಾಂಟೇರ್ಷಗಳ ಹೆಸರು.	ಎಕರೆ.	ಹರಾಜು ಮಾಡುವ ತಾರೀಖು.	ಹರಾಜು ಮಾಡುವ ಸ್ಥಳ.
ಬೆಂಗಳೂರು ...	ಬಟ್ಟನು ಹೆಬ್ಬಾಳ ...	100	15-6-1907	ಬೆಂಗಳೂರು.
ಡಿಟೋ	ಬ್ರಹ್ಮಸಂದ್ರ ಪ್ಲಾಂಟೇರ್ಷ	48		
ಡಿಟೋ	ಗಂಟಿಗಾನಹಳ್ಳಿ ಡಿಟೋ ...	300		
ಡಿಟೋ	ಸೂಲಿಕೆರೆ ಡಿಟೋ	200		
ನೆಲಮಂಗಲ ...	ಬಳ್ಳಗೆರೆ ಡಿಟೋ	400	20—6—07	ನೆಲಮಂಗಲ.
ಡಿಟೋ	ಬೈರಕಟ್ಟಹಳ್ಳಿ ಗೊಲ್ಲಹಳ್ಳಿ ಡಿಟೋ	86		
ಡಿಟೋ	ಬೂವ್ಮನಹಳ್ಳಿ ಡಿಟೋ	174		
ಹೊಸಕೋಟೆ ...	ಅರಳೇಘಾಕನಹಳ್ಳಿ ಡಿಟೋ ...	184½	25—6—07	ಕಾಡಗುಡಿ.
ಡಿಟೋ	ಗೊಲ್ಲಹಳ್ಳಿ ಡಿಟೋ	287		
ಡಿಟೋ	ಕಾಡಗೋಡಿ ಪ್ಲಾಂಟೇರ್ಷ ಸಾದರಮಂಗಲದ ನರಸರಿ ಪ್ಲಾಂಟೇರ್ಷ			
ದೇವನಹಳ್ಳಿ ...	ನವಿಕನಹಳ್ಳಿ ಸಂದಲ್ ಪ್ಲಾಂಟೇರ್ಷ ...	65		
ಡಿಟೋ	ತಾಲ್ಲೂಕು ಕಟೇರಿಯಿಂದಿನ ಪ್ಲಾಂಟೇರ್ಷ ...	5		
ಡಿಟೋ	ನವಾಬ್ ಬಂಗಲೆ ಡಿಟೋ ...	7 ಗುಂಟೆ.		
ಡಿಟೋ	ಸೊಣ್ಣಪ್ಪನಹಳ್ಳಿ ಡಿಟೋ ...	4 ಎಕರೆ.		
ಡಿಟೋ	ಬೂವನಹಳ್ಳಿ ಡಿಟೋ ...	47	28—6—07	ದೇವನಹಳ್ಳಿ.
ಡಿಟೋ	ಯರತಿಗಾನಹಳ್ಳಿ ಡಿಟೋ ...	210		
ಡಿಟೋ	ಪಟ್ಟಸಕೋಟೆ ಡಿಟೋ	300		
ಡಿಟೋ	ರಾಯಸಂದ್ರ ಡಿಟೋ	250		
ಡಿಟೋ	ದಿಬ್ಬಗಿರಿಪಟ್ಟ ಡಿಟೋ ...	600		
ಡಿಟೋ	ಮಂಡಿಬಲೆ ಡಿಟೋ ...	200		
ಡಿಟೋ	ಅಕ್ಕುಂಪ್ಯಾಟೆ ಅಥವಾ ಖಾಸೀಬಾಗ್ ಪ್ಲಾಂಟೇರ್ಷ.	101		
ದೊಡ್ಡಬಳ್ಳಾಪುರ	ಪಾರ್ಜೋಗಿಹಳ್ಳಿ ಡಿಟೋ	29	29—6—07	ದೊಡ್ಡಬಳ್ಳಾಪುರ.
ಡಿಟೋ	ಮುದ್ದೇನಹಳ್ಳಿ ಡಿಟೋ ...	25		
ಡಿಟೋ	ಕೋಲೂರು ಡಿಟೋ ...	100		
ಹೊಸಕೋಟೆ	ಹಳೆಜಡಿಗೇನಹಳ್ಳಿ ...	455	25—6—07	ಹೊಸಕೋಟೆ.
ಡಿಟೋ	ನಲ್ಲೂಲ್ A ಮತ್ತು B ...	734		
ಡಿಟೋ	ಡಿಟೋ C ...	486		
ಡಿಟೋ	ಅಪ್ಪಸಂದ್ರ ...	547		
ನೆಲಮಂಗಲ	ಕೆಂಜನಪುರ ...	535	20—6—07	ನೆಲಮಂಗಲ.
ಡಿಟೋ	ಅರ್ಕಾವತಿ ...	154		
ಡಿಟೋ	ಮಾವಿನಕೊಮನಹಳ್ಳಿ ...	435		
ಡಿಟೋ	ಜಕ್ಕಸಂದ್ರ ...	330		
ಡಿಟೋ	ಕೃಷ್ಣರಾಜಪುರ ...	423		
ಡಿಟೋ	ಮಾಜೋಹಳ್ಳಿ ...	270		

ಷರಾ—2. ಹರಾಜು ಜೈದಾದ ಕೂಡ್ಲೆ ಖರೀದಿದಾರನು ¼ ಹಿಸ್ಸೆ ಮೊಬಲಗನ್ನು ಕಟ್ಟಬೇಕು. ಉಳಿದ ನುಚ್ಚಾಲು ಹಿಸ್ಸೆಯನ್ನು ಖರೀದಿ ತಾರೀಖು ಲಾಗಾಯಿತು 7 ದಿವಸಗಳ ಒಳಗಾಗಿ ಕಟ್ಟಬೇಕು. ಇದಕ್ಕೆ ತಪ್ಪಿದಲ್ಲಿ ಡಿಪಾಜಿಟ್ ಮೊಬಲಗನ್ನು ಸರ್ಕಾರಕ್ಕೆ ಕೇರಿಸಿಕೊಳ್ಳುವದಲ್ಲದೆ ಹುಲ್ಲನ್ನು ದುಸರಾ ಹರಾಜು ಮಾಡಿ ಅದರಿಂದ ಉಂಟಾಗುವ ನಷ್ಟಕ್ಕೆ ಅವಲ್ ಖರೀದಿದಾರನನ್ನು ಗುರಿಮಾಡಲಾಗುತ್ತೆ. ಏನಾದರೂ ಹೆಚ್ಚು ಉತ್ಪತ್ತಿ ಆದಲ್ಲಿ ಅವಲ್ ಖರೀದಿದಾರನು ಯಾವ ವಿಧದಲ್ಲೂ ಭಾಗಿಯಾಗುವದಿಲ್ಲ. ಪೂರ್ತ ಹಣ ಪಾವತಿ ಮಾಡಿದ ಕೂಡಲೆ ಹುಲ್ಲು ಕುಯ್ಯುವದಕ್ಕೆ ಲೈಸೆನ್ಸು ಕೊಡಲ್ಪಡುತ್ತೆ.

3. ಪ್ಲಾಂಟೇಷನ್ನಲ್ಲಿ ಹರಾಜುದಾರನ ಅಜಾಗ್ರತೆಯಿಂದ ಬಂಕಿ ವಗೈರೆ ಸಂಭವಿಸಿದಲ್ಲಿ ಖರೀದಿದಾರನು ಜವಾಬ್ದಾರನಾಗಿರುತ್ತಾನೆ. ಖರೀದಿದಾರನಿಂದಲಾಗಲಿ ಅವನ ಕಡೆ ಜನಗಳಿಂದಲಾಗಲೀ ಏನಾದರೂ ಫಾರೆಸ್ಟ್ ತಕ್ಸೀರು ನಡದಲ್ಲಿ ಫಾರೆಸ್ಟ್ ರೆಗ್ಯುಲೇರ್ಷ ೧೮೬೫ ಶಿಕ್ಷೆಗೆ ಗುರಿಮಾಡಲ್ಪಡುವನು.

4. ಮೇಲಿನ ಪ್ಲಾಂಟೇರ್ಷಗಳ ಹುಲ್ಲನ್ನು ಹಗಲಿನಲ್ಲಿ ಹರಾಜು ಮಂಜೂರಾದ ಅಂದರೆ ಲೈಸೆನ್ಸು ಕೊಟ್ಟ ತಾರೀಖು ಲಾಗಾಯಿತು 1908ನೆ ಜನವರಿ 31ನೆ ತಾರೀಖು ವರಿವಿಗೂ ತೆಗದುಕೊಳ್ಳಬಹುದು.

ಟಿ. ಅಬ್ದುಲ್ ಕರೀಂ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಬೆಂಗಳೂರು ಡಿಸ್ಟ್ರಿಕ್ಟ್.